**MVC No. 942 /2022 ದಿನಾಂಕಃ15-07-2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಯು ಎಂ ಸಿ ವಕೀಲರಿಂದಃ- 4ನೇ ಎದುರುದಾರರ ಪರವಾಗಿ**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ನನಗೆ ತಿಳಿದಿದ್ದು, ಅವು ಸತ್ಯವಾಗಿರುತ್ತವೆ. ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ಆಥೋರೈಸೇಷನ್ ಲೆಟರ್ ಹಾಜರುಪಡಿಸಿದ್ದು ಅದನ್ನು ನಿ.ಆರ್ 7 ಎಂದು ಗುರುತಿಸಲಾಯಿತು.

ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್ 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಎಂ ಎಸ್ ಎನ್ ವಕೀಲರಿಂದ 2ನೇ ಎದುರುದಾರರ ಪರವಾಗಿ**

ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಮೃತ ವಿಕಿತ್ ನಿಧಾನವಾಗಿ ವಾಹನ ಚಾಲನೆ ಮಾಡುತ್ತಿದ್ದ ಬಗ್ಗೆ ನಾನು ನೋಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಅಪಘಾತ ಪಡಿಸಿರುವ ವಾಹನ ಸಂಖ್ಯೆಕೆ ಎ 12 ಎಂ 3450 ಆಗಿರುತ್ತದೆ ಎಂದು ಪ್ರ ವ ವ, ಶವ ತನಿಖೆ ಮತ್ತು ರಕ್ತ ಸಂಬಂಧಿಗಳ ಹೇಳಿಕೆಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ವಿಕಿತ್ ಚಲಾಯಿಸುತ್ತಿದ್ದ ಒಮಿನಿ ವಾಹನದ ಸಂಖ್ಯೆಕೆ ಎ 09 ಪಿ 3771 ಆಗಿರುತ್ತದೆ. ವಿಕಿತ್ ಚಲಾಯಿಸುತ್ತಿದ್ದ ವಾಹನದ ಮುಂದೆ ಹೋಗುತ್ತಿದ್ದ ವಾಹನದ ಸಂಖ್ಯೆ ಕೆ ಎ 12 ಎಂ 3450 ಆಗಿರುತ್ತದೆ. ಅಂತಿಮ ವರದಿಯಲ್ಲಿ ವಿಕಿತ್ ಚಲಾಯಿಸುತ್ತಿದ್ದ ವಾಹನದ ಮುಂದೆ ಹೋಗುತ್ತಿದ್ದ ವಾಹನದ ಸಂಖ್ಯೆ ಕೆ ಎ 18 ಎಂ 9450 ಆಗಿರುತ್ತದೆ. ವಿಕಿತ್ ಚಲಾಯಿಸುತ್ತಿದ್ದ ವಾಹನದ ಮಂದೆ ಹೋಗುತ್ತಿದ್ದ ವಾಹನದ ನೋಂದಣಿ ಸಂಖ್ಯೆ ಪ್ರ ವ ವ ದಲ್ಲಿ ಮತ್ತು ಅಂತಿಮ ವರದಿಯಲ್ಲಿ ಬೇರೆ ಬೇರೆ ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರು ಗೈರುಹಾಜರಿದ್ದು ಅರ್ಜಿದಾರರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ